ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಕರ್ನಾಟಕದಲ್ಲಿ ಮೈಸೂರು ತಳಿ ರೇಷ್ಮೆ ಗೂಡನ್ನು ಕಡ್ಡಾಯವಾಗಿ ಬೆಳೆಯುವ (ತಾಲ್ಲೂಕುವಾರು ಪ್ರದೇಶ) ಪ್ರದೇಶಗಳು ಯಾವುವು ಎಂದು ಕೇಳಿರುವುದಕ್ಕೆ ಮಾನ್ಯ ಮಂತ್ರಿಯವರು ಮಾಗಡಿ ತಾಲ್ಲೂಕು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಹಾಗೂ ತುಮಕೂರು ತಾಲ್ಲೂಕು ಹೆಬ್ಬೂರು ಹೋಬಳಿಗಳಲ್ಲಿ ಬೆಳೆಯಲಾಗುತ್ತದೆ ಎಂದು ಹೇಳಿದ್ದಾರೆ. ಆ ಪ್ರದೇಶಗಳಲ್ಲಿ ಎಷ್ಟೆಷ್ಟು ಎಕರೆಗಳಲ್ಲಿ ಈ ರೇಷ್ಮೆ ಕೃಷಿಯನ್ನು ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸುತ್ತಾರೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗ ತಾಲ್ಲೂಕುವಾರು ಪ್ರಶ್ನೆಯನ್ನು ನೀವು ಇಲ್ಲಿ ಕೇಳಿಲ್ಲ. ಇದಕ್ಕೆ ಸಪರೇಟ್ ಪ್ರಶ್ನೆ ಕೇಳಿದರೆ ನಾನು ಹೇಳಿರುತ್ತೇನೆ. ಈಗ ಒಟ್ಟು ಸುಮಾರು ೮ ಸಾವಿರ ಎಕರೆಯಲ್ಲಿ ಈ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಶ್ರೀ ಡಿ. ಟಿ. ಮಾಯಣ್ಣ —ಆದರೆ ಇಲ್ಲಿ ರೇಷ್ಮೆ ಗೂಡಿನಲ್ಲಿ ಮೊಟ್ಟೆ ತಯಾರಿಸುವುದಕ್ಕೂ, ನೂಲುವುದಕ್ಕೂ ವ್ಯತ್ಯಾಸವಿಷ್ಟು ಎಂದು ಕೇಳಿದಕ್ಕೆ ೧೫, ೧೪ ರೂಪಾಯಿ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ ಸುಮಾರು ಅರ್ಧ ಗೂಡಿನಲ್ಲಿ ಮೊಟ್ಟೆ ತಯಾರಾಗುವುದಿಲ್ಲ. ಅದು ಮಾರುಕಟ್ಟೆಗೆ ಹೋಗುತ್ತದೆ. ಆಲ್ಲಿ ಕಡ್ಡಾಯವಾಗಿ ಮೈಸೂರು ತಳಿಯನ್ನು ಬೆಳೆಯಬೇಕು ಎಂದು ಇದೆ. ಆದುದರಿಂದ ಒಂದು ಸಾರಿ ಒಂದು ಕೆ. ಜಿ. ಗೆ ೮–೧೦ ರೂಪಾಯಿ ಬೆಲೆಯಾಗುತ್ತದೆ. ಅಷ್ಟೂ ಮಾರ್ಕೆಟಿಗೆ ತೆಗೆದುಕೊಂಡು ಹೋಗಿ ಮಾರಬೇಕಾಗುತ್ತದೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತೊಂದರೆಯಾಗುವ ರೈತರಿಗೆ ಬೋನಸ್ ಕೊಡಲಿಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಬೋನಸ್ ಬಗ್ಗೆ ಸರ್ಕಾರದ ಮುಂದೆ ಎನೂ ವಿಷಯ ಇಲ್ಲ ಆದರೆ ಇಂತಿಷ್ಟೇ ರೀಲಿಂಗಿಗೆ ಉಪಯೋಗಿಸಬೇಕು, ಇಂತಿಷ್ಟೇ ಮೊಟ್ಟೆ ಮಾಡಬೇಕು ಎಂದು ರೂಲ್ಸ್ ಇದೆ, ಆ ರೀತಿ ರೈತರು ಮಾಡಬೇಕಾಗುತ್ತದೆ.

ಶ್ರೀ ಡಿ. ಟಿ. ಮಾಯಣ್ಣ —ರೇಷ್ಮೆ ಗೂಡಿನಲ್ಲಿ ರೇಷ್ಮೆ ಹುಳುವಿನ ಮೊಟ್ಟೆ ತಯಾರಿಸಲು ತೆಗೆದು ಕೊಳ್ಳುವ ರೇಷ್ಮೆ ಗೂಡಿನ ಪ್ರಮಾಣವೆಷ್ಟು, ರೇಷ್ಮೆ ಹುಳುವಿನ ಮೊಟ್ಟೆ ತಯಾರಿಸದೆ ನೂಲುವುದಕ್ಕೆ ಹೋಗುವ ರೇಷ್ಮೆ ಗೂಡಿನ ಪ್ರಮಾಣವೆಷ್ಟು, ಈ ವ್ಯತ್ಯಾಸವನ್ನು ಸರಿದೂಗಿಸಲು ಸರಕಾರ ಯಾವುದಾದರೂ ಯೋಜನೆಯನ್ನು ಕಾರ್ಯಗತಗೊಳಿಸುವುದೇ ಎಂದು ನಾನು ಕೇಳಿದ್ದೇನೆ. ಅದಕ್ಕೆ ನೀವು ''ಸೂಕ್ತ ಕ್ರಮವನ್ನು ಈ ದಿಸೆಯಲ್ಲಿ ತೆಗೆದುಕೂಳ್ಳಲಾಗಿದೆ'' ಎಂದು ಹೇಳಿದ್ದೀರಿ. ಏನು ಆ ಕಾರ್ಯಕ್ರಮ ಎನ್ನುವುದನ್ನು ತಿಳಿಸಿ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಮೊಟ್ಟೆ ಮಾಡುವುದಕ್ಕೆ ಕೊಡತಕ್ಕ ಗೂಡು ಏನಿದೆ ಅದನ್ನು ಸಾಧಾರಣವಾಗಿ ಒಳ್ಳೆಯ ಕ್ವಾಲಿಟಿ ಟಿಸ್ಟ್ ಮಾಡಿ, ಹುಳುವಿನ ತೂಕ ಪೂರ್ತಿ ಅದರ ಗುಣಮಟ್ಟ ಎಲ್ಲ ವನ್ನೂ ಎಗ್ಸಾಮಿನ್‌ಮಾಡಿ ಅದರ ಮೇಲೆ ಬೆಲೆ ನಿಗದಿಗೊಳಿಸಿ ಕೊಡುತ್ತಾರೆ. ರೀಲಿಂಗಿಗೆ ಕೊಡತಕ್ಕದ್ದು ಏನಿದೆ ಅದು ಸ್ವಲ್ಪ ಕಡಿಮೆ ದರದಲ್ಲಿ ಸಿಗುತ್ತದೆ, ಆದ್ದರಿಂದ ಅದನ್ನು ಕಡಿಮೆ ಬೆಲೆಗೆ ಕೊಡುತ್ತಾ.. ಇದ್ದಾರೆ.

ಶ್ರೀ ಡಿ. ಟಿ. ಮಾಯಣ್ಣ.—ಆ ಪ್ರದೇಶದ ರೈತರಿಗೆ ತೊಂದರೆಯಾಗಿದೆ, ಅವರಿಗೆ ಬೋನಸ್ ಕೊಡಬೇಕು.

ಶ್ರೀಮತಿ ರೇಣುಕಾ ರಾಜೇಂದ್ರನ್.—ಆಲೋಚನೆ ಮಾಡುತ್ತೇನೆ.

Plan for Improvement of Malanadu area by Establishing a separate Board.

412 SRI L. T. THIMMAPPA HEGDE (Sagara).—Will the Minister for Finance and Planning be pleased to state.—

(a) whether it has come to the notice of the Government that the abundant natural resources, in Malnad District have not yet been utilised sufficiently ;

(b) whether the Government has thougth of reconsidering the need for the study of the special problems of those district ;

(c) whether Government intend to set up a separate board for Malnad Development ; if so, the details about the same ?

SRI VEERAPPA MOILY (Minister for Finarce and Planning),—

(a) Yes.

(b) It has been considered.

(c) No.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಪ್ರಶ್ನೆಯಲ್ಲಿ ನಾನು 'ಮಲೆನಾಡು ಜಿಲ್ಲೆಗಳಲ್ಲಿ ವಿಫಲವಾಗಿರುವ ನೈಸರ್ಗಿಕ ಸಂಪತ್ತಿನ ಉಪಯೋಗ ಇನ್ನೂ ಸಾಕಷ್ಟು ಆಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ, ಮತ್ತು ಇಲ್ಲಿನ ವಿಶಿಷ್ಟ ಸಮಸ್ಯೆಗಳ ಪರಿಹಾರಕ್ಕೆಪ್ರತ್ಯೇಕ ಪರಿಗಣನೆ ಆಗತ್ಯವನ್ನು ಸರಕಾರ ಗಮನಿಸಿದೆಯೇ ಎಂದು ಕೇಳಿದಕ್ಕೆ ಗಮನಿಸಿದೆ' ಎಂದು ಹೇಳಿದ್ದೀರಿ. ಮೂರನೆಯದಾಗಿ, ಮಲೆನಾಡು ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿ ರಚಿಸುವ ಉದ್ದೇಶ ಸರಕಾರಕ್ಕಿದೆಯೇ ಎಂದು ಕೇಳಿದಕ್ಕೆ 'ಉದ್ದೇಶ ಇಲ್ಲ' ಎಂದು ಹೇಳಿದ್ದೀರಿ. ಮೊದಲನೇ ಎರಡು ಪ್ರಶ್ನೆಗಳಿಗೆ ತದ್ವಿರುದ್ಧವಾದ ಉತ್ತರ ಮೂರನೇ ಪ್ರಶ್ನೆಗೆ ಬಂದಿದೆ. ತಾವು ನೈಸರ್ಗಿಕ ಸಂಪತ್ತಿನ ಪೂರ್ಣ ಉಪಯೋಗವಾಗಿಲ್ಲ ಎಂದು ಒಪ್ಪಿಕೊಂಡಿದ್ದೀರಿ. ಆದನ್ನು ಗಮನಕ್ಕೆ ತೆಗೆದುಕೊಂಡಿದ್ದಿರಾ. ಅಲ್ಲಿನ ಜನಗಳು ಅನೇಕ ತೊಂದರೆಗಳಲ್ಲಿದ್ದಾರೆ. ಅಲ್ಲಿ ಸಾಮೂಹಿಕ ಅಭಿವೃದ್ಧಿ ಕಾರ್ಯಗಳು ಆಗುತ್ತಾ ಇಲ್ಲ. ಅಲ್ಲಿ ವಿಶಿಷ್ಟ ಸಮಸ್ಯೆಗಳಿವೆ. ಅಲ್ಲಿ ಶಾಲೆಗಳ ತೊಂದರೆ ಇದೆ, ರಸ್ತೆಗಳ ತೊಂದರೆ ಇದೆ. ಅಲ್ಲಿ ವಿಶೇಷ ಪರಿಗಣನೆ ಆಗತ್ಯ ಎಂದು ಗಮನಿಸಿರುವಾಗ, ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ವಿವರ ಕೊಡುತ್ತೀರಾ?

† ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಮಲೆನಾಡು ಪ್ರದೇಶದ ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿ ರಚಿಸಬೇಡಿ ಅಭಿವೃದ್ಧಿ ಮಾಡಬೇಕಾದ ಅವಶ್ಯಕತೆ ಇಲ್ಲ. ಮಲೆನಾಡಿನ ಪ್ರದೇಶ ವನ್ನೊಳಗೊಂಡೇ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಬಹಳ ಕಾಲದಿಂದ ನಡೆಯುತ್ತಾ ಬಂದಿದೆ. ಇಡೀ ದೇಶದಲ್ಲಿ ವ್ಯಾಪಕವಾಗಿ ಪಶ್ಚಿಮ ಘಟ್ಟಗಳ ಒಂದು ಯೋಜನೆಯನ್ನು ರೂಪಿಸಿ ಮುತ್ತ ಆ ಬಗ್ಗೆ ವಿಶೇಷ, ವಿಶಿಷ್ಟ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತು ಉಳಿದ ಪ್ರಾಂತದ ಮುಖ್ಯ ಮಂತ್ರಿಗಳನ್ನೊಳಗೊಂಡ ಒಂದು ಸಮಿತಿಯನ್ನು ಯೋಜನಾ ಆಯೋಗ ರಚಿಸಿ ಮಾಡಿದೆ ಹೀಗೆ ಯೋಜನೆಯಲ್ಲಿ ಸುಮಾರು ೪೦೬ ಲಕ್ಷ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮಲೆನಾಡಿನ ಅಭಿವೃದ್ಧಿ ಇದರಿಂದ ಆಗಿದೆ. ಅದೇ ಪ್ರಕಾರ ಮಂಗಳೂರು ಬಂದರಿಗೆ ಆಸ್ಪತ್ರೆ ಜಿಲ್ಲೆಗಳು, ಪ್ರಮುಖವಾಗಿ ಮಲೆನಾಡಿನ ಜಿಲ್ಲೆಗಳ ಬಗ್ಗೆ ಇಂಟರ್ ಲ್ಯಾಂಡ್ ಡೆವಲಪ್‌ಮೆಂಟ್ ಮುಖಾಂತರ ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡಿಕೊಂಡು ಅಭಿವೃದ್ಧಿ ಮಾಡಿದ್ದಾರೆ. ಆದುದರಿಂದ ಪ್ರತ್ಯೇಕವಾಗಿ ನಮ್ಮ ಮಲೆನಾಡಿಗೆ ಸಂಬಂಧಪಟ್ಟ ಹಾಗೆ ಮತ್ತು ಪಶ್ಚಿಮ ಘಟ್ಟಗಳಿಗೆ ಸಂಬಂಧಪಟ್ಟಹಾಗೆ ಅವುಗಳ ಅಭಿವೃದ್ಧಿಗೆ ವಿಶೇಷ ಮಂಡಲಿಯನ್ನು ಮಾಡುವಂತ ಆವಶ್ಯಕತೆ ಸರ್ಕಾರಕ್ಕೆ ಇಲ್ಲ. ವಿಶಿಷ್ಟ ಸಮಸ್ಯೆಗಳು ಏನಿವೆ ಅವುಗಳ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ್ನು ಮಾಡುವಂತ ಅವಶ್ಯಕತೆಯನ್ನು ಸರ್ಕಾರ ಕಂಡುಕೊಂಡಿದೆ. ಅದಕ್ಕೆ ಬೇರೆ ಬೇರೆ ರೀತಿಯಲ್ಲಿ ಸಾಧನೆ ಮಾಡಲಿಕ್ಕೆ ಸರ್ಕಾರದ ಯೋಜನೆ ಇದೆ. ಇದರ ಬಗ್ಗೆ ಅನೇಕ ಯೋಜನೆಗಳನ್ನು ಪಾಕ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಮಂಗಳೂರು ಬಂದರು ಅಭಿವೃದ್ಧಿ ಆಯಿತು ಅಂದರೆ ಮಂಗಳೂರು ವಿಶಿಷ್ಟ ಸ್ಥಾನವನ್ನು ಪಡೆದೇ ತೀರುತ್ತದೆ. ಮಂಗಳೂರು ಹೊರತಾಗಿ ಮಲೆನಾಡಿನ ಒಳನಾಡಿನ ಜಿಲ್ಲೆಗಳಿವೆ. ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು. ಹಾಸನದ ಕೆಲವು ಭಾಗ ಏನಿದೆ ಅಲ್ಲಿ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿರತಕ್ಕ ಪ್ರದೇಶವಿದೆ. ಆದರೆ ಬಗ್ಗೆ ವಿಶೇಷವಾದ ಗಮನವನ್ನು ಕೊಡದೇ ಹೋದರೆ ಸಾಧ್ಯವಾಗುವುದಿಲ್ಲ. ಅಲ್ಲಿ ವಿಶಿಷ್ಟವಾದ ಸಮಸ್ಯೆಗಳು ಇರುವುದರಿಂದ ಅದಕ್ಕೆ

ಪ್ರತ್ಯೇಕ ಮಂಡಲಿ ರಚನೆಯಾಗದೇ ಹೋದರೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಿಂದ ಏನೇನೂ ಸಾಧ್ಯವಾಗಿಲ್ಲ. ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮಲೆನಾಡಿನ ಶಾಸಕರನ್ನು ಒಟ್ಟಿಗೆ ಕರೆದು ಏನು ತೊಂದರೆ ಇದೆ, ಏನಾಗಬೇಕು ಎಂದು ಕೇಳಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಮಲೆನಾಡಿನ ಜನ ಅತ್ಯಂತ ದುರ್ಗತಿಗೆ ಬಿದ್ದಿದ್ದಾರೆ, ಕೇಳುವವರಿಲ್ಲ ಎನ್ನುವ ಸ್ಥಿತಿಗೆ ಬಂದಿದ್ದಾರೆ, ಆದ್ದರಿಂದ ಮಂತ್ರಿಗಳು ಸ್ಪಷ್ಟವಾದ ರೀತಿಯಲ್ಲಿ ಆಶ್ವಾಸನೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಎರಡು ವಿಧವಾಗಿ ಮಲೆನಾಡಿನ ಅಭಿವೃದ್ಧಿಯನ್ನು ಸಾಧನೆ ಮಾಡುತ್ತಾ ಇದ್ದೇವೆ. ಪಶ್ಚಿಮ ಘಟ್ಟಗಳ ಯೋಜನೆ ಪ್ರಕಾರ, ಅದರಲ್ಲಿ ಶಿವಮೊಗ್ಗ, ಮಂಗಳೂರು, ಚಿಕ್ಕಮಗಳೂರು ಬರುತ್ತದೆ ಪಶ್ಚಿಮ ಘಟ್ಟದ ಎಲ್ಲಾ ಜಿಲ್ಲೆಗಳು ಬರುತ್ತವೆ. ಮತ್ತೆ ಇಂಟರ್ ಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಬರುವುದಿಲ್ಲ. ಮಂಗಳೂರು ಹಿನ್ನಾಡಿನ ಸಮಾರು ೯ ಜಿಲ್ಲೆಗಳು ಬರುತ್ತವೆ. ಮಲೆನಾಡಿನ ೯ ಜಿಲ್ಲೆಗಳು ಹೊಂದಿಕೊಂಡಿರುವುದರಿಂದ ಅಲ್ಲಿ ಕೈಗಾರಿಕಾಭಿವೃದ್ಧಿ, ಕೃಷಿ ಅಭಿವೃದ್ಧಿ ಮುಂತಾದ ಅಭಿವೃದ್ಧಿಗಳನ್ನು ಸಾಧಿಸಬೇಕು ಎಂದು ಅಂದಾಜು ಮಾಡಿದ್ದೇವೆ. ಮಾನ್ಯ ಸದಸ್ಯರು ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿಯನ್ನು ರಚಿಸುವ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ಕೇಳಿಕೊಳ್ಳುತ್ತಾ ಇದ್ದಾರೆ: ಈಗ ನಾವು ಇಂಟರ್ ಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ಮಲೆನಾಡಿನ ಜಿಲ್ಲೆಗಳನ್ನೇ ಹೊಂದಿಕೊಂಡಿರತಕ್ಕ ಜಿಲ್ಲೆಗಳ ಅಭಿವೃದ್ಧಿ ಹೇಗೆ ಆಗಬೇಕು, ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿ ಮಾಡಬೇಕೇ, ಪ್ಲಾನಿಂಟ್ ಸೆಕ್ಟಾರ್ ಅಂದರೆ, ಜೋರ್ಡ್ ಅಥವಾ ಕಾರ್ಪೊರೇಷನ್ ಮೂಲಕ ಮಾಡಬೇಕೇ ಎಂದು ಕಳೆದ ವಾರ ಪ್ಲಾನಿಂಗ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಟೆಕ್ನಿಕಲ್ ವರ್ಕಿಂಗ್ ಗ್ರೂಪನ್ನು ರಚನೆ ಮಾಡಿದ್ದೇವೆ. ಅವರು ಡಿಸೆಂಬರ್ ೧೯೮೦ ರೊಳಗೆ ಒಂದು ವರದಿಯನ್ನು ಒಪ್ಪಿಸಬೇಕು. ಅವರು ಶಾಸಕರನ್ನು ಮತ್ತು ಮಲೆನಾಡಿನ ಅಭಿವೃದ್ಧಿಗೆ ಹೊಂದಿಕೊಂಡಂಥ ಎಲ್ಲಾ ಜನರ ಜೊತೆಯಲ್ಲಿ ಸಮಾಲೋಚನೆ ಮಾಡಿಕೊಂಡು, ೧೯೮೦-೮೫ ರ ಒನೇ ಯೋಜನೆಯ ಒಂದು ಪರಿಧಿಯಲ್ಲಿ ಯಾವರೀತಿ ಮಲೆನಾಡಿನ ಪ್ರದೇಶಗಳ ಅಭಿವೃದ್ಧಿಯಾಗಬೇಕು, ಪ್ರತ್ಯೇಕ ಮಂಡಲಿ ಮಾಡಬೇಕು ಅಂದರೆ, ಮಲೆನಾಡಿನ ಅಭಿವೃದ್ಧಿ ಮಂಡಲಿಯನ್ನು ಮಾಡುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಇದರಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆ ಬಿಟ್ಟು ಹೋಗಿದೆ, ಅದನ್ನು ಸೇರಿಸಿಕೊಳ್ಳಬೇಕು.

ಶ್ರೀ ಎಂ.ಸಿ. ನಾನಯ್ಯ.—ಇದು ಅತ್ಯಂತ ಮುಖ್ಯವಾದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆ ಭಾಗದಿಂದ ಬರತಕ್ಕವರು.

(ನಾಲ್ಕೈದು ಜನ ಸದಸ್ಯರು ಒಟ್ಟಿಗೆ ಎಂದು ನಿಂತು ಮಲೆನಾಡಿನ ಅಭಿವೃದ್ಧಿ ಬಗ್ಗೆ ಪ್ರಶ್ನೆ ಕೇಳಿದರು)

(Interruptions)

ಅಧ್ಯಕ್ಷರು.—ಎಲ್ಲರೂ ಒಂದೇ ಸಲ ಎದ್ದು ನಿಂತುಕೊಂಡರೆ ಹೇಗೆ, ಕುಳಿತುಕೊಳ್ಳಿ, ಹಾಫ್-ಆನ್-ಆವರ್ ಡಿಸ್ಕೆಷನ್‌ಗೆ ಬೇಕಾದರೆ ಕಳಿಸಿಕೊಡಿ, ನಾನೇ ಆಲೋಚನೆ ಮಾಡುತ್ತೇನೆ.

Expenditure for Security arrangements for National Executive Committee Meeting of Janatha Party During 1978.

437. SRI G.K. TAKKED (Parasgad) —Will the Chief Minister be pleased to state.—

the expenditure incurred by the State Government for Bandobust and other security arrangements item-wise during the National Executive Committee meeting of the Janatha Party held in the State between January and February 1978?